NEW HORIZON COLLEGE
LIBRARY
KASTURINAGAR
BANGALORE-43

63102

# ಮೊದಲ ಸೆಮಿಸ್ಟರ್ ಬಿ.ಸಿ.ಎಚ್.ಎನ್./ಬಿ.ಸಿ.ಎಲ್.ಎಸ್./ಬಿ.ಕಾಂ. ಪದವಿ ಪರೀಕ್ಷೆ, ಮಾರ್ಚ್/ಏಪ್ರಿಲ್ 2024
## (CBCS) (R) (2018-19 Onwards)
## ಕನ್ನಡ
## ಕನ್ನಡ ಭಾಷಾ ಪತ್ರ

Time : 3 Hours | Max. Marks : 70

I. ಅ) ಈ ಪದ್ಯದ ಭಾವಾರ್ಥ ಬರೆಯಿರಿ : **(1×6=6)**

ಕಡೆಗೀಲಿಲ್ಲದ ಬಂಡಿ ಹೊಡೆಗೆಡೆಯದೆ ಮಾಣ್ಬುದೆ ?
ಕಡೆಗೀಲು ಬಂಡಿಗಾಧಾರ
ಕಡುದರ್ಪವೇರಿದ ಒಡಲೆಂಬ ಬಂಡಿಗೆ
ಮೃಢಭಕ್ತರ ನುಡಿಗಡಣವೇ ಕಡೆಗೀಲು
ಕಾಣಾ ರಾಮನಾಥ.

ಆ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **(2×2=4)**

1) ಜೇಡರ ದಾಸಿಮಯ್ಯ
2) ಭೀಮ
3) ಡಾ. ಚಂದ್ರಶೇಖರ ಕಂಬಾರ
4) ದ್ರೌಪದಿ

ಇ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ : **(1×10=10)**

1) ಡಾಂಭಿಕ ಭಕ್ತಿಯ ಸ್ವರೂಪ ವಚನಗಳಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿ.
2) ಗಂಗಾಮಾಯಿ ಕವಿತೆಯಲ್ಲಿ ಕಂಬಾರರು ಕೆರೆಯ ಪರಿಸರವನ್ನು ಹೇಗೆ ಚಿತ್ರಿಸಿದ್ದಾರೆ ? ವಿವರಿಸಿ.

II. ಅ) **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : **(2×5=10)**

1) ಹಳೆಮನೆ ರಿಪೇರಿಯ ಸಂದರ್ಭ
2) 'ರೊಟ್ಟಿಕತೆ'ಯ ರೈಲ್ವೆ ನಿಲ್ದಾಣ
3) ಚಿಕ್ಕರಾಮು ಮತ್ತು ಪುಟ್ಟಲಿಂಗನ ನಾಟಕದ ಪಾತ್ರಾಭಿನಯ

ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ : **(1×10=10)**

1) ಹಸಿವು, ಅಸಹಾಯಕತೆ, ಅವಮಾನ, ಆತಂಕಗಳು ''ರೊಟ್ಟಿ'' ಕತೆಯಲ್ಲಿ ಮೂಡಿ ಬಂದಿರುವ ಬಗೆ ಹೇಗೆ ? ವಿವರಿಸಿ.
2) ಹಾವು, ಸುಂಡಿಲಿ, ದನ, ಮಂಗ ಇವು ಬರ್ಮಾಚಾರಿಯ ಮನಸ್ಸಿನ ಭಾವನೆಗಳ ಸಂಕೇತ. ವಿವೇಚಿಸಿ.

P.T.O.

III. ಅ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : **(1×5=5)**

1) ಹೂವಿನ ತೂಕದ ಹೆಣ್ಣನ್ನು ತಂದ ಧೀರಕುಮಾರನ ಸಾಹಸ.

2) ಚೆನ್ನವ್ವಳ ಧೈರ್ಯವನ್ನು ಬಂಟರು ಸ್ವೀಕರಿಸಿದ ಬಗೆ.

ಆ) **ಒಂದು** ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ : **(1×10=10)**

1) ಸ್ತ್ರೀ ವ್ಯಾಮೋಹಿ ರಾಜನಿಂದ ಅಮಾಯಕರು ಕಷ್ಟಕ್ಕೆ ಸಿಲುಕಿದ ಬಗೆಯನ್ನು ನಿರೂಪಿಸಿ.

2) ''ಕಿಳ್ಳೆಕ್ಯಾತರು'' ಯಾರು ? ತೊಗಲು ಗೊಂಬೆ ಆಟದಲ್ಲಿ ಅವರ ಪಾತ್ರವೇನು ? ವಿವರಿಸಿ.

IV. ಅ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾದ ಉತ್ತರ ಬರೆಯಿರಿ : **(1×5=5)**

1) ಪ್ರಕಾಶಕ ಮತ್ತು ಮಾರಾಟಗಾರರ ಸಮಸ್ಯೆಗಳು.

2) ಕನ್ನಡದ ಪ್ರಮುಖ ಅಂಕಣಕಾರರು.

ಆ) **ಒಂದು** ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ : **(1×10=10)**

1) ಅಂಕಣ ಸಾಹಿತ್ಯದ ವ್ಯಾಪ್ತಿ ಹಾಗೂ ಸ್ವರೂಪವನ್ನು ಕುರಿತು ಬರೆಯಿರಿ.

2) ವ್ಯಾಪಾರ ಕ್ಷೇತ್ರದಲ್ಲಿ ಮರೆಯಾಗುತ್ತಿರುವ ಸಾಮಾಜಿಕ ಮತ್ತು ನೈತಿಕ ಹೊಣೆಗಾರಿಕೆಯನ್ನು ವಿವರಿಸಿ.

---